# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2408

ಮಾನ್ಯ ಸದಸ್ಯರ ಹೆಸರು : ಶ್ರೀ ಕೆ ಅಬ್ದುಲ್ ಜಬ್ಬರ್ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ಉತ್ತರಿಸಬೇಕಾದ ದಿನಾಂಕ : 27.03.2026

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವಾರ್ಷಿಕ ಬಜೆಟ್ ಎಷ್ಟು; ಕಳೆದ ವರ್ಷಕ್ಕಿಂತ ಪ್ರಸ್ತುತ ಎಷ್ಟು ಹೆಚ್ಚಳ/ ಕಡಿತವಾಗಿದೆ; | **2024-25ನೇ** ಸಾಲಿನ ಇಲಾಖೆ ಬಜೆಟ್ **ರೂ.34,523.98 ಕೋಟಿ**<br>**2025-26ನೇ** ಸಾಲಿನ ಇಲಾಖೆ ಬಜೆಟ್ **ರೂ.35,027.16 ಕೋಟಿ**<br>ಇಲಾಖೆಯ ವಾರ್ಷಿಕ ಬಜೆಟ್ ಕಳೆದ ವರ್ಷಕ್ಕಿಂತ **ರೂ.503.18 ಕೋಟಿ ಹೆಚ್ಚಳವಾಗಿದೆ**. |
| ಆ) | ಖಾಲಿ ಇರುವ ಅಂಗವಾಡಿ ಕಾರ್ಯಕರ್ತೆ/ ಸಹಾಯಕಿ ಹುದ್ದೆಗಳ ಸಂಖ್ಯೆ ಎಷ್ಟು; ಅವುಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳಾವುವು; | ಪ್ರಸ್ತುತ ರಾಜ್ಯದಲ್ಲಿ ಒಟ್ಟು **2943** ಅಂಗನವಾಡಿ ಕಾರ್ಯಕರ್ತೆ ಹುದ್ದೆಗಳು ಹಾಗೂ **9681** ಅಂಗನವಾಡಿ ಸಹಾಯಕಿ ಹುದ್ದೆಗಳು ಖಾಲಿ ಇರುತ್ತವೆ.<br><br>ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಆನ್ಲೈನ್ ತಂತ್ರಾಂಶ ಅಭಿವೃದ್ಧಿ ಪಡಿಸಿದ್ದು, ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಆಯ್ಕೆ ಸಮಿತಿ ಮೂಲಕ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ.<br><br>ಕಳೆದ ಒಂದು ವರ್ಷದಲ್ಲಿ ಆನ್‌ಲೈನ್ ನೇಮಕಾತಿ ಮೂಲಕ **2347** ಅಂಗನವಾಡಿ ಕಾರ್ಯಕರ್ತೆಯರನ್ನು ಮತ್ತು **7268** ಅಂಗನವಾಡಿ ಸಹಾಯಕಿರನ್ನು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಆಯ್ಕೆ ಸಮಿತಿ ಮೂಲಕ ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ. ಈ ಪ್ರಕ್ರಿಯೆ ನಿರಂತರವಾಗಿರುತ್ತದೆ. ವಿವರವನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ. |
| ಇ) | ಯೋಜನೆಗಳ ಮೇಲ್ವಿಚಾರಣೆಗಾಗಿ ಡಿಜಿಟಲ್ ವ್ಯವಸ್ಥೆ ಜಾರಿಗೆ ತರಲಾಗಿದೆಯೇ; ಇದ್ದಲ್ಲಿ, ಮಾಹಿತಿ ಒದಗಿಸುವುದು; | ಹೌದು. ವಿವರವನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ. |
| ಈ) | ಮಹಿಳಾ ಸ್ವಸಹಾಯ ಸಂಘಗಳಿಗೆ ನೀಡಲಾಗುತ್ತಿರುವ ಸಾಲ ಹಾಗೂ ಸಬ್ಸಿಡಿ ವಿವರವೇನು; | ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಪಂಗಡದ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳಿಗೆ 2025-26ನೇ ಸಾಲಿನಲ್ಲಿ ಕಿರುಸಾಲ ಯೋಜನೆಯಡಿಯಲ್ಲಿ ಪ್ರತಿ ಗುಂಪಿಗೆ ರೂ.20.00 ಲಕ್ಷದಂತೆ ಬಡ್ಡಿರಹಿತ ಸಾಲ ನೀಡಲಾಗುತ್ತಿದ್ದು, ಒಟ್ಟು 11 ಜಿಲ್ಲೆಗಳ 15 ಗುಂಪುಗಳಿಗೆ ಸಾಲ ನೀಡುವ ಗುರಿ ಇರುತ್ತದೆ. |

| | | |
|---|---|---|
| ಉ) | ಉದ್ಯೋಗಾವಕಾಶಗಳಿಗಾಗಿ ಮಹಿಳೆಯರಿಗೆ ನೀಡಲಾಗುತ್ತಿರುವ ತರಬೇತಿ ಕಾರ್ಯಕ್ರಮಗಳು ಯಾವುವು; | ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಮಹಿಳಾ ತರಬೇತಿ ಯೋಜನೆಯಡಿ ಕೌಶಲ್ಯ ಅಭಿವೃದ್ಧಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಮಹಿಳೆಯರಿಗೆ ತರಬೇತಿ ನೀಡಿ, ಸ್ವಯಂ ಉದ್ಯೋಗ ಆರಂಭಿಸಲು ಹಾಗೂ ಇತರೆ ಸಂಸ್ಥೆಗಳಲ್ಲಿ ಉದ್ಯೋಗವಕಾಶ ಕಲ್ಪಿಸಿ ಕೊಡಲು ಕ್ರಮವಹಿಸಲಾಗಿದೆ.<br>• 2024-25ನೇ ಸಾಲಿನಲ್ಲಿ ಸದರಿ ಯೋಜನೆಯಡಿಯಲ್ಲಿ 25 ಜಿಲ್ಲೆಗಳಲ್ಲಿ 13 ವಿಷಯಗಳ ಕುರಿತು ತರಬೇತಿ ಹಮ್ಮಿಕೊಳ್ಳಲು 28 ಸಂಸ್ಥೆಗಳನ್ನು ಗುರುತಿಸಲಾಗಿದ್ದು, ರೂ.200.00 ಲಕ್ಷ ಬಿಡುಗಡೆಯಾಗಿರುತ್ತದೆ. ಈವರೆಗೆ ತರಬೇತಿ ನೀಡಿರುವ ಮಾಹಿತಿಯನ್ನು ಮತ್ತು ತರಬೇತಿ ನಂತರ ಉದ್ಯೋಗ ಪಡೆದ ವಿವರಗಳನ್ನು **ಅನುಬಂಧ-03** ರಲ್ಲಿ ಒದಗಿಸಲಾಗಿದೆ.<br>• ಉದ್ಯೋಗಿನಿ ಯೋಜನೆಯಡಿ ಬ್ಯಾಂಕಿನಿಂದ ಸಾಲ ಮಂಜೂರಾದಂತಹ ಅಭ್ಯರ್ಥಿಗಳಿಗೆ ಉದ್ಯಮ ಶೀಲತಾ ಅಭಿವೃದ್ಧಿ ಕಾರ್ಯಕ್ರಮ (EDP) ತರಬೇತಿಯನ್ನು ನೀಡಲಾಗುತ್ತಿದೆ. |

ಸಂಖ್ಯೆ: ಮಮಇ 69 ಸ್ವೀಮರ 2026

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು

# ಅನುಬಂಧ-1

| 2025-26ನೇ ಸಾಲಿನಲ್ಲಿ ಆನ್ಲೈನ್ ನೇಮಕಾತಿ ಮೂಲಕ ನೇಮಕಗೊಂಡಿರುವ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಸಂಖ್ಯೆ | | | |
|---|---|---|---|
| ಕ್ರ. ಸಂ. | ಜಿಲ್ಲೆಯ ಹೆಸರು | ನೇಮಕಾತಿ ಮಾಡಲಾದ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ | ನೇಮಕಾತಿ ಮಾಡಲಾದ ಅಂಗನವಾಡಿ ಸಹಾಯಕಿಯರ ಸಂಖ್ಯೆ |
| 1 | ಬಾಗಲಕೋಟೆ | 93 | 428 |
| 2 | ಬೆಂಗಳೂರು ಗ್ರಾ. ಜಿಲ್ಲೆ | 43 | 115 |
| 3 | ಬೆಂಗಳೂರು ನಗರ | 118 | 330 |
| 4 | ಬಳ್ಳಾರಿ | 85 | 235 |
| 5 | ವಿಜಯನಗರ | 49 | 201 |
| 6 | ಬೆಳಗಾವಿ | 186 | 556 |
| 7 | ಬೀದರ | 100 | 192 |
| 8 | ವಿಜಯಪುರ | 36 | 102 |
| 9 | ಚಾಮರಾಜನಗರ | 76 | 141 |
| 10 | ಚಿಕ್ಕಬಳ್ಳಾಪುರ | 33 | 241 |
| 11 | ಚಿಕ್ಕಮಗಳೂರು | 43 | 289 |
| 12 | ಚಿತ್ರದುರ್ಗ | 78 | 169 |
| 13 | ದಾವಣಗೆರೆ | 48 | 271 |
| 14 | ದಕ್ಷಿಣ ಕನ್ನಡ | 47 | 166 |
| 15 | ಧಾರವಾಡ | 6 | 0 |
| 16 | ಗದಗ | 46 | 146 |
| 17 | ಕಲ್ಬುರ್ಗಿ | 61 | 238 |
| 18 | ಹಾಸನ | 182 | 472 |
| 19 | ಹಾವೇರಿ | 40 | 130 |
| 20 | ಮಡಿಕೇರಿ | 54 | 161 |
| 21 | ಕೋಲಾರ | 69 | 243 |

| 2025-26ನೇ ಸಾಲಿನಲ್ಲಿ ಆನ್ಲೈನ್ ನೇಮಕಾತಿ ಮೂಲಕ ನೇಮಕಗೊಂಡಿರುವ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಸಂಖ್ಯೆ | | | |
|---|---|---|---|
| ಕ್ರ. ಸಂ. | ಜಿಲ್ಲೆಯ ಹೆಸರು | ನೇಮಕಾತಿ ಮಾಡಲಾದ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ | ನೇಮಕಾತಿ ಮಾಡಲಾದ ಅಂಗನವಾಡಿ ಸಹಾಯಕಿಯರ ಸಂಖ್ಯೆ |
| 22 | ಕೊಪ್ಪಳ | 87 | 374 |
| 23 | ಮಂಡ್ಯ | 46 | 203 |
| 24 | ರಾಯಚೂರು | 110 | 263 |
| 25 | ರಾಮನಗರ | 59 | 77 |
| 26 | ಮೈಸೂರು | 48 | 156 |
| 27 | ಶಿವಮೊಗ್ಗ | 59 | 494 |
| 28 | ತುಮಕೂರು | 86 | 212 |
| 29 | ಉಡುಪಿ | 101 | 54 |
| 30 | ಉತ್ತರಕನ್ನಡ | 100 | 326 |
| 31 | ಯಾದಗಿರಿ | 158 | 283 |
| **ಒಟ್ಟು** | | **2347** | **7268** |

## ಅನುಬಂಧ-2

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಅನುಷ್ಠಾನಗೊಳಿಸುತ್ತಿರುವ ಈ ಕೆಳಕಂಡ ಕಾರ್ಯಕ್ರಮ/ ಯೋಜನೆಗಳ ಮೇಲ್ವಿಚಾರಣೆಗಾಗಿ ಡಿಜಿಟಲ್ ವ್ಯವಸ್ಥೆ ಜಾರಿಯಲ್ಲಿರುತ್ತದೆ.

- **ಪೋಷಣ್ ಟ್ರ್ಯಾಕರ್:** ಕೇಂದ್ರ ಸರ್ಕಾರದಿಂದ ಮೊಬೈಲ್ ಆಧಾರಿತ ಪೋಷಣ್ ಟ್ರ್ಯಾಕರ್ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದ್ದು, ಕ್ಷೇತ್ರ ಮಟ್ಟದಲ್ಲಿ ಅಂಗನವಾಡಿ ಕೇಂದ್ರಗಳ ಫಲಾನುಭವಿಗಳ ದಾಖಲಾತಿ, ಹಾಜರಾತಿ, ಪೂರಕ ಪೌಷ್ಟಿಕ ವಿತರಣೆ ಮಕ್ಕಳ ಬೆಳವಣಿಗೆ ಮೇಲ್ವಿಚಾರಣೆ ಹಾಗೂ ಮೂಲಭೂತ ಸೌಕರ್ಯಗಳ ಮಾಹಿತಿಯನ್ನು ಈ ತಂತ್ರಾಂಶದಲ್ಲಿ Real Time Monitoring ಮಾಡಲಾಗುತ್ತಿದೆ. ಸದರಿ ತಂತ್ರಾಂಶದ ಮೂಲಕ ಕ್ಷೇತ್ರ ಮಟ್ಟದಲ್ಲಿ ನಿರ್ವಹಣೆ, ಕಾರ್ಯಕ್ರಮಗಳ ಅನುಷ್ಠಾನ ಮತ್ತು ಅನುಸರಣೆ ಮಾಡಲಾಗುತ್ತಿದೆ.
- **ಪೂರಕ ಪೌಷ್ಟಿಕ ಆಹಾರ:** ಅಂಗನವಾಡಿ ಕೇಂದ್ರಗಳಲ್ಲಿ ಫಲಾನುಭವಿಗಳಿಗೆ ಸರಬರಾಜು ಮಾಡಲಾಗುತ್ತಿರುವ ಪೂರಕ ಪೌಷ್ಟಿಕ ಆಹಾರವನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವ ಉದ್ದೇಶದಿಂದ ಇಲಾಖೆಯು Face Recognition System (FRS) ವ್ಯವಸ್ಥೆಯನ್ನು ಜಾರಿಗೊಳಿಸಿದ್ದು, ಪ್ರತಿ ಮಾಹೆ ಪ್ರತಿ ಫಲಾನುಭವಿಗೆ ಅಂಗನವಾಡಿ ಕೇಂದ್ರಗಳಲ್ಲಿ ಆಹಾರ ವಿತರಣೆಯಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳುವ ಮೂಲಕ Digital Monitoring ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ಅನುಷ್ಠಾನಗೊಳಿಸಿದೆ.
- **ಮಿಷನ್ ಶಕ್ತಿ ಕಾರ್ಯಕ್ರಮಗಳು:** ಮಿಷನ್ ಶಕ್ತಿ ಡ್ಯಾಶ್‌ಬೋರ್ಡ್ ಎಂಬುದು ಮಿಷನ್ ಶಕ್ತಿ (ಒನ್ ಸ್ಟಾಪ್ ಸೆಂಟರ್, ಮಹಿಳಾ ಸಹಾಯವಾಣಿ-181, ಶಕ್ತಿ ಸದನ, ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ, ಮಹಿಳಾ ಸಬಲೀಕರಣ ಘಟಕ, ಸಖಿ ನಿವಾಸ ಕೇಂದ್ರ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ) ಯೋಜನೆಗಳಿಗೆ ಸಂಬಂಧಿಸಿದ ಮಾಹಿತಿಯ ಅನುಷ್ಠಾನ ಮತ್ತು ನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡಲು ಭಾರತ ಸರ್ಕಾರವು ಜಾರಿಗೆ ತಂದಿರುವ ಡಿಜಿಟಲ್ ವ್ಯವಸ್ಥೆಯಾಗಿದೆ.
- ಡ್ಯಾಶ್‌ಬೋರ್ಡ್ ಮೂಲಕ, ಜಿಲ್ಲೆಗಳಲ್ಲಿ ಅನುಷ್ಠಾನಗೊಂಡ ಯೋಜನೆಗಳು, ಕಾರ್ಯನಿರತ ಸಂಸ್ಥೆಗಳಲ್ಲಿ ದಾಖಲಾದ ಪ್ರಕರಣಗಳು, ಒದಗಿಸಲಾದ ಸೇವೆಗಳು, ಫಲಾನುಭವಿಗಳ ಮಾಹಿತಿ ಮತ್ತು ಯೋಜನೆಗಳ ಚಟುವಟಿಕೆಗಳ ವಿವರಗಳನ್ನು ಆನ್‌ಲೈನ್‌ನಲ್ಲಿ ದಾಖಲಿಸಲಾಗುತ್ತದೆ ಮತ್ತು ನಿರ್ವಹಿಸಲಾಗುತ್ತದೆ. ಇದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಯೋಜನೆಯ ಪ್ರಗತಿ, ಸೇವೆಗಳ ಅನುಷ್ಠಾನ ಮತ್ತು ಕೇಂದ್ರಗಳ ಕಾರ್ಯಕ್ಷಮತೆಯನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡಲು ಅನುವು ಮಾಡಿಕೊಡುತ್ತದೆ.
- **ಗೃಹಲಕ್ಷ್ಮಿ ಯೋಜನೆ**ಯಡಿ ಅರ್ಜಿ ನೋಂದಣಿಯನ್ನು ಸೇವಾ ಸಿಂಧು ಕೇಂದ್ರಗಳಾದ ಗ್ರಾಮ ಒನ್, ಬೆಂಗಳೂರು ಒನ್ ,ಕರ್ನಾಟಕ ಒನ್ ಸೇವಾ ಕೇಂದ್ರಗಳಲ್ಲಿ Online ಮೂಲಕ ಅರ್ಜಿ ನೋಂದಾಯಿಸಲು ಅವಕಾಶ ಕಲ್ಪಿಸಲಾಗಿದೆ. ಸದರಿ ಯೋಜನೆಯಡಿ ಫಲಾನುಭವಿಗಳ ಅರ್ಜಿ ಸ್ಥಿತಿ/ ಧನಸಹಾಯ ಪಾವತಿ ಕುರಿತು ಸೇವಾಸಿಂಧುವಿನ Application tracker ನ ಮೂಲಕ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ.
- **ಭಾಗ್ಯಲಕ್ಷ್ಮಿ-ಸುಕನ್ಯಾ ಸಮೃದ್ಧಿ ಯೋಜನೆ**ಯಡಿ ಫಲಾನುಭವಿಗಳಿಗೆ ನೋಂದಣಿಯನ್ನು ಹಾಗೂ ವಿವಿಧ ಹಂತಗಳಲ್ಲಿ ಮಂಜೂರಾತಿ ಪ್ರಕ್ರಿಯೆಯನ್ನು ಭಾಗ್ಯಲಕ್ಷ್ಮಿ ತಂತ್ರಾಶದ ಮೂಲಕ ನಡೆಸಲಾಗುತ್ತಿದೆ. ಮುಂದುವರೆದು ಯೋಜನೆಯಡಿ ಬಾಂಡ್ ಪಡೆದು 18 ವರ್ಷ ಪೂರ್ಣಗೊಂಡ ಫಲಾನುಭವಿಗಳಿಗೆ ಪರಿಪಕ್ವ ಮೊತ್ತ ಪಾವತಿಗಾಗಿ, NIC ವತಿಯಿಂದ "Maturity Claim Module" ಅನ್ನು ಸಿದ್ಧಪಡಿಸಲಾಗಿದ್ದು, ಭಾರತೀಯ ಜೀವ ವಿಮಾ ನಿಗಮದಿಂದ ಪರಿಪಕ್ವ ಮೊತ್ತವನ್ನು ಫಲಾಭನುಭವಿಗಳ ಖಾತೆಗೆ ನೇರವಾಗಿ ಜಮ ಮಾಡಲಾಗುತ್ತಿದೆ.

## ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

- ಉದ್ಯೋಗಿನಿ, ಚೇತನ, ಧನಶ್ರೀ, ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ ಹಾಗೂ ಮಾಜಿ ದೇವದಾಸಿ ಮಹಿಳೆಯರ ಯೋಜನೆಗಳನ್ನು ಡಿಜಿಟಲ್ ವ್ಯವಸ್ಥೆಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.
- ಅರ್ಜಿಗಳ .ಸ್ವೀಕಾರ, ಅರ್ಜಿಗಳ ಪರಿಶೀಲನೆ, ಅರ್ಜಿಗಳಶಿಫಾರಸ್ಸು ಮತ್ತು ಮಂಜೂರಾತಿ ಹಾಗೂ ಡಿಬಿಟಿ ಮುಖಾಂತರ ಸಹಾಯಧನ ಬಿಡುಗಡೆ ಇವುಗಳನ್ನು ಡಿಜಿಟಲ್ ವ್ಯವಸ್ಥೆಯ ಮೂಲಕವೇ ಮಾಡಲಾಗುತ್ತಿದೆ.

# ಅನುಬಂಧ-3

## ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

| ಕ್ರ.ಸಂ | ಜಿಲ್ಲೆ | ತರಬೇತಿಯ ವಿಷಯ | ಅಭ್ಯರ್ಥಿಗಳ ಸಂಖ್ಯೆ | ಷರಾ |
|---|---|---|---|---|
| 1 | ಬೆಂಗಳೂರು | Assistant fashion Designer | 33 | ತರಬೇತಿ ಪ್ರಗತಿಯಲ್ಲಿದೆ |
| 2 | | Front office excutive | 58 | ತರಬೇತಿ ಪ್ರಾರಂಭವಾಗಿರುವುದಿಲ್ಲ |
| 3 | ಬೆಳಗಾವಿ | Assistant Beauty Therapist | 45 | ತರಬೇತಿ ಪ್ರಾರಂಭವಾಗಿರುವುದಿಲ್ಲ |
| 4 | ವಿಜಯಪುರ | Field Technician – Computing and Peripherals | 40 | ತರಬೇತಿ ಪ್ರಗತಿಯಲ್ಲಿದೆ |
| 5 | ಚಿತ್ರದುರ್ಗ | Self-employed Tailor | 31 | ತರಬೇತಿ ಪ್ರಗತಿಯಲ್ಲಿದೆ |
| 6 | ಚಿಕ್ಕಬಳ್ಳಾಪುರ | Self-employed Tailor | 59 | ತರಬೇತಿ ಮುಕ್ತಾಯಗೊಂಡಿರುತ್ತದೆ |
| 8 | ಧಾರವಾಡ | Domestic Data Entry Operator | 130 | ತರಬೇತಿ ಪ್ರಗತಿಯಲ್ಲಿದೆ |
| 9 | ಗದಗ | Domestic Data Entry Operator | 15 | ತರಬೇತಿ ಪ್ರಗತಿಯಲ್ಲಿದೆ |
| 10 | ಕಲಬುರ್ಗಿ | Domestic Data Entry Operator | 42 | ತರಬೇತಿ ಪ್ರಾರಂಭವಾಗಿರುವುದಿಲ್ಲ |
| 11 | ಹಾವೇರಿ | Domestic Data Entry Operator | 15 | ತರಬೇತಿ ಪ್ರಗತಿಯಲ್ಲಿದೆ |
| 12 | ಕೊಪ್ಪಳ | Assistant fashion Designer | 17 | ತರಬೇತಿ ಪ್ರಗತಿಯಲ್ಲಿದೆ |
| 13 | ಕೋಲಾರ | Self-employed Tailor | 30 | ತರಬೇತಿ ಮುಕ್ತಾಯಗೊಂಡಿರುತ್ತದೆ |
| | | Domestic Data Entry Operator | 55 | |
| | | Accounts Executive-Accounts payable & Receivable | 55 | |
| | | Junior Software Developer | 55 | |
| 15 | ಮೈಸೂರು | Domestic Helpdesk Attendant | 35 | ತರಬೇತಿ ಪ್ರಗತಿಯಲ್ಲಿದೆ |
| 16 | | Domestic Data Entry Operator | 35 | |
| 17 | ರಾಯಚೂರು | Fashion Designer | 35 | ತರಬೇತಿ ಮುಕ್ತಾಯಗೊಂಡಿರುತ್ತದೆ |
| 18 | ರಾಮನಗರ | Sewing machine Operator | 152 | ತರಬೇತಿ ಪ್ರಗತಿಯಲ್ಲಿದೆ |
| 19 | | Beauty therapist | 21 | |
| 20 | ಶಿವಮೊಗ್ಗ | Domestic Data Entry Operator | 80 | ತರಬೇತಿ ಮುಕ್ತಾಯಗೊಂಡಿರುತ್ತದೆ |
| 21 | ತುಮಕೂರು | Fashion Designing | 30 | ತರಬೇತಿ ಮುಕ್ತಾಯಗೊಂಡಿರುತ್ತದೆ |
| 22 | ಮಂಡ್ಯ | Assistant Fashion Designing | 31 | ತರಬೇತಿ ಮುಕ್ತಾಯಗೊಂಡಿರುತ್ತದೆ |
| 23 | ಗದಗ | Assistant Fashion Designing | 21 | ತರಬೇತಿ ಪ್ರಗತಿಯಲ್ಲಿದೆ |
| 24 | ಉತ್ತರ ಕನ್ನಡ | Domestic Data Entry Operator | 15 | ತರಬೇತಿ ಪ್ರಗತಿಯಲ್ಲಿದೆ |
| 25 | ಹಾವೇರಿ | Sewing machine Operator | 19 | ತರಬೇತಿ ಪ್ರಾರಂಭಗೊಂಡಿರುವುದಿಲ್ಲ |